## ಪ್ರವಾಸಿ ಸಂಸ್ಥೆಯ ಆಯ್ಕೆ

ಹಲವು ಮಂದಿ ಸೇರಿ ಒಗ್ಗಟ್ಟಾಗಿ ವಿದೇಶ ಪ್ರವಾಸ ಮಾಡಬಯಸಿದಾಗ ಅವರು ಪ್ರವಾಸಿ ಸಂಸ್ಥೆಗಳತ್ತ ಮುಖ ಮಾಡುವುದು ಸಹಜ. ಮರುಳು ಮಾಡುವ ಜಾಹೀರಾತುಗಳೊಂದಿಗೆ ಅನೇಕ ಪ್ರವಾಸಿ ಸಂಸ್ಥೆಗಳು ನಮ್ಮನ್ನು ಆಕರ್ಷಿಸುತ್ತವೆ. ಕಡಿಮೆ ಹಣದಲ್ಲಿ ವಿದೇಶ ಪ್ರವಾಸ ಮಾಡಿಸುವುದಾಗಿ ಕೆಲವು ಸಂಸ್ಥೆಗಳು ಸೆಳೆಯುತ್ತವೆ. ಹೊಸದಾಗಿ ಹೋಗುವವರು ಅದರಲ್ಲೂ ಕಡಿಮೆ ಹಣದಲ್ಲಿ ವಿದೇಶ ಪ್ರವಾಸ ಮಾಡುವವರು ಆ ಸಂಸ್ಥೆಗಳಿಂದ ಅವರ ಪ್ರವಾಸದ ವೇಳಾಪಟ್ಟಿ, ಅದರಲ್ಲಿ ಏನೇನು ಸೇರಿರುತ್ತದೆ ಮತ್ತು ಸೇರಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಯಾವ ಸ್ಥಳಗಳನ್ನು ತೋರಿಸುತ್ತಾರೆ, ಉಳಿಯುವ ಹೋಟೆಲ್ ಯಾವುದು, ಕೆಲ ಸ್ಥಳಗಳಲ್ಲಿ ಪ್ರವಾಸಿಗರಿಗೆ ಪ್ರವೇಶಧನವಿರುವುದರಿಂದ ಅದು ಅವರ ಪ್ಯಾಕೇಜ್‌ನಲ್ಲಿ ಸೇರಿದೆಯೇ, ಕುಡಿಯಲು ನೀರಿನ ಬಾಟಲ್ ಕೊಡುತ್ತಾರೆಯೇ ಮುಂತಾದ ವಿಷಯಗಳನ್ನು ಕೇಳಿ ತಿಳಿದುಕೊಳ್ಳಬೇಕು. ವಿದೇಶದಲ್ಲಿ ಅಲ್ಲಿನ ಕರೆನ್ಸಿ ಸಾಮಾನ್ಯವಾಗಿ ನಮ್ಮ ರೂಪಾಯಿಗಿಂತ ಹೆಚ್ಚಿರುವುದರಿಂದ ನಾವು ಅಲ್ಲಿ ಖರ್ಚು ಮಾಡುವ ಹಣದ ಲೆಕ್ಕ ನಮಗಿರಬೇಕು.

ಕೆಲವು ಪ್ರವಾಸಿ ಸಂಸ್ಥೆಗಳು ಆಯೋಜಿಸುವ ಪ್ರವಾಸದಲ್ಲಿ ಮಧ್ಯಾಹ್ನದ ಊಟ ಅವರು ಕೊಡುವುದಿಲ್ಲ. ಇನ್ನು ಕೆಲವರು ಕೇವಲ ತಿಂಡಿ ಮಾತ್ರ ಕೊಡುತ್ತಾರೆ. ಅದಕ್ಕೆ ಪರಿಹಾರವನ್ನು ನಾವು ಕಂಡುಕೊಳ್ಳಬೇಕು. ಇಲ್ಲವೇ ಊಟ–ತಿಂಡಿ ಸೇರಿಸಿ ಪ್ಯಾಕೇಜ್ ರೂಪಿಸಿಕೊಡಲು ಹೇಳಬೇಕು. ಸಸ್ಯಾಹಾರ ಮಾತ್ರ ತಿನ್ನುವುದಾದರೆ ಮೊದಲೇ ಅವರಿಗೆ ಹೇಳಿ ವ್ಯವಸ್ಥೆ ಮಾಡಿಕೊಳ್ಳಬೇಕು. ನಾವು ಹೋಗುವ ದೇಶದ ಬಗ್ಗೆ ನೋಡುವ ಸ್ಥಳಗಳ ಬಗ್ಗೆ ಕೊಂಚ ಅಧ್ಯಯನ ಮಾಡಿದ್ದರೆ ಪ್ರವಾಸ ರೂಪಿಸಲು ಸುಲಭವಾಗುತ್ತದೆ.

‘ನಾವೇ ಸ್ನೇಹಿತರ ಗುಂಪು ವಿದೇಶ ಪ್ರವಾಸವನ್ನು ಮಾಡುವಾಗ ನಮಗೆ ಬೇಕಾದ ಸ್ಥಳಗಳ ಪಟ್ಟಿಯನ್ನು ಪ್ರವಾಸಿ ಸಂಸ್ಥೆಗೆ ನೀಡಿ ಅವುಗಳನ್ನು ಒಳಗೊಂಡಂತೆ ಪ್ಯಾಕೇಜ್ ಮಾಡಿಕೊಡಲು ಕೇಳುತ್ತೇವೆ. ನಮ್ಮ ಆಸಕ್ತಿಗೆ ಅನುಗುಣವಾಗಿ ಇತರ ಪ್ರವಾಸಿಗರ ಪಟ್ಟಿಯಲ್ಲಿ ಇರದ ಸ್ಥಳಗಳನ್ನು ನಾವು ನೋಡಬಹುದು. ಥಾಯ್ಲೆಂಡ್‌ನ ಪುಕೆಟ್‌ಗೆ ಹೋದಾಗ ಅಲ್ಲಿನ ಅಪರೂಪದ ಶೆಲ್ ಮ್ಯೂಸಿಯಂ ನೋಡಿದೆವು. ಭೂತಾನ್ ದೇಶದಲ್ಲಿ ಅಲ್ಲಿನ ಅಂಚೆಕಚೇರಿಗೆ ಹೋಗಿ ನಮ್ಮ ಭಾವಚಿತ್ರವಿರುವ ಅಂಚೆಚೀಟಿಯನ್ನು ಪಡೆದೆವು. ದುಬೈನಲ್ಲಿ ಇಂತೆಜಾರ್ ಸಲೀಂ ಎಂಬ ವಿಶಿಷ್ಟ ಸಂಗೀತ ಸಂಗ್ರಹಕಾರನ ಅಂಗಡಿಯನ್ನು ದರ್ಶಿಸಿದೆವು. ಸಿಂಗಪುರವನ್ನು ರಾತ್ರಿ ವೇಳೆ ನೋಡುವ ಅವಕಾಶ ನಮ್ಮದಾಗಿತ್ತು. ಲಿಮೊಸೀನ್ ಎಂಬ ಕಾರನ್ನು ಬಾಡಿಗೆ ಪಡೆದು ದುಬೈನಲ್ಲಿ ಪ್ರಯಾಣಿಸಿದ ಅನುಭವ ಸಹ ನಮ್ಮದು. ಹೋದ ದೇಶಗಳಲ್ಲಿ ಅಲ್ಲಿನ ಸ್ಥಳೀಯ ಖಾದ್ಯಗಳನ್ನು ಒಂದು ಬಾರಿಯಾದರೂ ರುಚಿ ನೋಡುವ ಅಭ್ಯಾಸ ನಮ್ಮದು’



ಕೇರಳದ ಕೊಚ್ಚಿಯಲ್ಲಿ ಟೀ ಅಂಗಡಿ ಇಟ್ಟುಕೊಂಡಿರುವ ವಿಜಯನ್ ದಂಪತಿಗೆ ವಿದೇಶ ಪ್ರವಾಸ ಮಾಡುವುದು ಕಷ್ಟವೆನ್ನಿಸಿಲ್ಲ...


ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು. ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ 9620444460

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.